

'ಯಾರೋ ಬಂದು ಅದೆಂತವೋ ಕಲ್ಲು ಅಂತ ಕಡಗೊಳಿಕೆ ಸುರ್ದು ಹೋಗಿದಾರೆ ಕನ... ನಾಳೆ ಆ ರುದ್ರಿ ಬಂದ್ ನೋಡಿದ್ರೆ ಸೀರೆ ಎತ್ತಿಗೆಂದು ಕುಣ್ದಾಡ್ತಳೆ..' ಎಂದು ಆತಂಕದಿಂದ ಹೇಳಿದ್ದಳು.

ರಾಕೇಶ ಬೆಳಗ್ಗೆ ತಿಂಡಿ ತಿಂದವನು ನಗರಕ್ಕೆ ಹೊರಡುವ ಮುಂಚೆ ಹೊಂಡದ ಕಡೆ ಹೋಗಿದ್ದ, ಕಡಗಿನ ಒಳಕ್ಕೆ ಕಲ್ಲುಗಳನ್ನೇನೋ ಸುರಿದಿದ್ದರು. ಆದರೆ, ಅವು ಹಿಟ್ಟುಗಲ್ಲು....

'ಯಾವ ಹಳ್ಳದಿಂದ ತುಂಬಿಕಂಡು ಬಂದ್ರೋ. ಇವನ್ನ ತಗಂಡು ಏನು ಮಾಡದು' ಎಂದು ಪೇಚಾಡುತ್ತಿದ್ದ. ಅಷ್ಟರಲ್ಲಿ ರುದ್ರಮ್ಮ ಗಂಡನೊಂದಿಗೆ ಆ ಕಡೆಯೇ ಬರುತ್ತಿದ್ದುದು ಕಂಡಿತ್ತು.

'ಅಯ್ಯೋ ಇವ್ಳು ಬೇರೆ ಈಗ್ಲೆ ಬಂದ್ಲಲ್ಲಾ ಇನ್ನೇನು ರಂಪ ಮಾಡ್ತಾಳೊ?' ಎಂದು ಭಯವಾಯಿತು. ಅವರು ದಾಟಿ ಹೋಗಲಿ ಎಂದುಕೊಳ್ಳುತ್ತಾ ಹೊಂಡದ ಕಡೆ ತಿರುಗಿ ಅದನ್ನು ಪರಿಶೀಲಿಸುತ್ತಿರುವಂತೆ ನಟಿಸುತ್ತಾ ನಿಂತಿದ್ದ.

ತುಸು ಹೊತ್ತು ನಿಂತು ಕಲ್ಲುಗಳನ್ನು ಗಮನಿಸಿದ ಅವರು ನಗು ನಗುತ್ತಲೇ ಏನೋ ಮಾತಾಡಿಕೊಳ್ಳುತ್ತಾ ದಾಟಿ ಹೋಗಿದ್ದರು. ಅವ್ವ ರುದ್ರಮ್ಮನ ಜತೆ ಏನಾದರೂ ರಂಪ ಮಾಡಿಕೊಂಡಾಳು ಎಂದು ಗಾಬರಿಗೊಂಡವನು ಅಂದು ಕೆಲಸದಿಂದ ಬೇಗಲೇ ವಾಪಾಸು ಬಂದಿದ್ದ. ಅವನು ಸಂಜೆ ನಗರದಿಂದ ಬರುವ ವೇಳೆಗಾಗಲೇ ಯಂತ್ರ ಬಂದು ರುದ್ರಮ್ಮನ ಹೊಲದಲ್ಲಿ ಬೋರ್ ಕೊರೆದು ಹೋಗಿತ್ತು. ಹಿಂದೆ ಮುಂದೆ ತಿರುಗುವಾಗ ಆ ದೈತ್ಯ ವಾಹನ ಹಾಗೂ ಅದರ ಜತೆ ಬಂದಿದ್ದ ಲಾರಿಯ ಚಕ್ರದಡಿಗೆ ಸಿಕ್ಕ ಆ ಹಿಟ್ಟುಗಲ್ಲುಗಳು ಹೊಸಕಿ ರಂಗೋಲಿ ಪುಡಿಯಂತೆ ಪರಿವರ್ತನೆ ಆಗಿದ್ದವು.

'ಮುಂದೇನು ಮಾಡುವುದಪ್ಪ' ಎಂದುಕೊಳ್ಳುತ್ತಾ ಆಕಾಶದ ಕಡೆ ತಲೆಯೆತ್ತಿ ನಿಂತಿದ್ದ. ಮುಂಗಾರು ಮೋಡಗಳು ದಟ್ಟೈಸತೊಡಗಿದ್ದವು. ಮಾಡಲು ಇನ್ನೇನೂ ಉಳಿದಿಲ್ಲ ಎನಿಸಿತು.

* * *

ಮಳೆಗಾಲ ಮುಗಿಯುವ ವೇಳೆಗೆ ಕಡಗಿನ ನೀರು ಹರಿದು ಹೊಂಡ ತುಂಬಿ ತುಳುಕಿತ್ತು. ಊರವರೆಲ್ಲಾ ಬಂದು ಹೆಡ್ಡಪ್ಪನ ಹೊಂಡ ನೋಡಿದರು. ಆದರೆ, ಹೊನ್ನಮ್ಮನಿಗೆ ಮಾತ್ರ ತುಂಬಿ ತುಳುಕುತ್ತಿದ್ದರೂ ಆ ಹೊಂಡದ ಬಗ್ಗೆ ಆಸಕ್ತಿಯೇ ಮೂಡಲಿಲ್ಲ.

ಅದರಿಂದಾಗಿ ಮನೆಯವರು ನೆಮ್ಮದಿ ಹಾಳು ಮಾಡಿಕೊಳ್ಳಲು ಬಿಡಬಾರದು ಎನ್ನಿಸಿತು ರಾಕೇಶನಿಗೆ. ಮುಂದಿನ ವರ್ಷದ ಹೊತ್ತಿಗೆ ಹೇಗೋ... ಈ ವರ್ಷ ಬೇಸಿಗೆಗೆ ಒಂದು ಬೆಳೆ ಬೆಳ್ಕಬಿಡಾಣ ಎಂದ. ಅವ್ವ ಅಪ್ಪನಿಂದ ಏನೂ ಪ್ರತಿಕ್ರಿಯೆ ಬಾರದಿದ್ದರೂ ರಾಕೇಶ ಧೈರ್ಯ ಮಾಡಿಯೇ ಬಿಟ್ಟ.

ಡಿಸೇಲ್ ಮೋಟಾರ್ ಬಂದು ಹೊಂಡದ ತಿಟ್ಟದ ಮೇಲೆ ಕುಳಿತಿತು. ಅದರಿಂದ ಹೊರಟ ಪೈಪುಗಳು ಹೊಂಡದ ನೀರೊಳಕ್ಕೆ ಇಳಿದವು. ಮಳೆಗಾಲದ ಬೆಳೆ ತೆಗೆದುಕೊಂಡ ಕೂಡಲೇ ಭೂಮಿಯನ್ನು ಉಳಿಸಿ ಹದ ಮಾಡಿಸಿದ. ಕೋಳಿಗೊಬ್ಬರ ಹೊಡೆಸಿ ಹಸನು ಮಾಡಿಸಿದ. ನರ್ಸರಿಯಿಂದ ಟೊಮಟೋ, ಬದನೆ, ಮೆಣಸಿನ ಸಸಿ ತರಿಸಿ ಕೂರಿಸಿದ.

ಪಾತಿಗೆ ನೀರು ಹರಿದಂತೆ ಸಸಿಗಳು ಚಿಗುರೊಡೆಯ ತೊಡಗಿದವು. ನಳನಳಿಸುವ ಹೊಲದಲ್ಲಿ ಎಲ್ಲಾರೂ ಉತ್ಸಾಹದಿಂದ ಕೆಲಸ ಮಾಡುತ್ತಿದ್ದರು.

ಹೊಂಡದ ನೀರು ಕೆಳಕ್ಕೆ ಇಳಿಯುತ್ತಾ ಹೋದಂತೆ ರಾಕೇಶನ ಬ್ಯಾಂಕಿನ ಲೆಕ್ಕದಲ್ಲಿದ್ದ ಹಣವೂ ಕರಗುತ್ತಾ ಹೋಯಿತು. ಅಂತೂ ಸಸಿಗಳೆಲ್ಲಾ ಹೂಗುಡಿಗೆ ಬಂದು ನಿಂತಿದ್ದವು. ಅವತ್ತು ಸಂಜೆ ರಾಕೇಶ ನಗರದಿಂದ ಬಂದಾಗ ಅವ್ವ ಮಂಕಾಗಿರುವುದನ್ನು ಗಮನಿಸಿದ.

'ಡೀಜೆಲ್ ಖಾಲಿಯಾಗಿತೆ ಕನ ಮಗಾ... ನಾಳೆ ಬರಾಗ ಹಿಡ್ಕಬಾ' ಎಂದ ಹೆಡ್ಡಪ್ಪ.

'ಡೀಜೆಲ್ ತರದು ಹಂಗಿರ್ಲಿ... ಹೊತಾರೆ ಒಂದ್ ಸಲ ಹೊಲದ್ ಕಡೆ ಹೋಗಿ ನೋಡಿಕೆಂಡ್ ಬಾ' ಎಂದು ಹೊನ್ನಮ್ಮ ಮಧ್ಯ ಪ್ರವೇಶಿಸಿ ಮಗನಿಗೆ ಹೇಳಿದಳು.

ಅವ್ವನ ಮಾತಿನ ಧಾಟಿಯಿಂದ ಏನೋ ಎಡವಟ್ಟಾಗಿರಬಹುದು ಎಂಬ ವಾಸನೆ ಅವನಿಗೆ ಬಡಿಯಿತು. ಅಷ್ಟು ಚೆನ್ನಾಗಿದ್ದ ಬೆಳೆಯನ್ನು ಯಾವುದಾದ್ರೂ ತುಡುಗು ದನಗಳು ಬಂದು ಮೇಯ್ಕಂಡು ಹೋಗಿರಬಹುದೇ... ಇಲ್ಲ ಹೊಂಡವೇ ಏನಾದರೂ ಕುಸಿದಿರಬಹುದೇ...

ರಾತ್ರಿಯೆಲ್ಲಾ ಚಡಪಡಿಸುತ್ತಿದ್ದ ರಾಕೇಶ ಬೆಳಗಾಗೆದ್ದು ಹೊಲದ ಕಡೆ ಹೊರಟ. ಹೊನ್ನಮ್ಮ ಅವನ ಹಿಂದೆ ಹೊರಟಳು. ಹೆಡ್ಡಪ್ಪ ಅವರನ್ನು ಹಿಂಬಾಲಿಸಿದ.